ಸಿ.ಸಿ. ನಂ.1132/2010

ಸಿಡಬ್ಲ್ಯೂ. 9 ಪಿಡಬ್ಲ್ಯೂ6

<u>ದಿನಾಂಕಃ05-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>**

ಕಡಬಿಶಿವಾಪುರದಿಂದ ಬಸ್ಸನ್ನು 6 ಗಂಟೆಗೆ ಬಿಟ್ಟೆನು. ನಂದಿಕಟ್ಟಿ ಗ್ರಾಮದ ಹತ್ತಿರ ಬಂದಾಗ ಸಮಯ 6-45 ಗಂಟೆ ಆಗಿತ್ತು. ನಂದಿಕಟ್ಟಿ ಗ್ರಾಮದ ಹತ್ತಿರ ಗಟಾರದ ಹೊರಗೆ ಬೆಂಕಿಹತ್ತಿತ್ತು ಎಂದರೆ ಸರಿ. ಬೆಂಕಿ ಹೊಗೆ ರೊಡ ತುಂಬಾ ಆಗಿತ್ತು ಎಂದರೆ ಸಾಕ್ಷಿಯು ರೊಡಿನ ಬದಿಯಲ್ಲಿ ಹಬ್ಬಿತ್ತು ಮುಂದಿನ ರಸ್ತೆ ಕಾಣುತ್ತಿರಲಿಲ್ಲ ಎಂದು ಹೇಳುತ್ತಾರೆ. ಬೆಂಕಿಯ ಹೊಗೆ ಎಡಗಡೆಯಿಂದ ಬಲಗಡೆಗೆ ಹಬ್ಬುತ್ತಿತ್ತು. ಆರೋಪಿಯು ತನ್ನ ವಾಹನವನ್ನು ಸೈಡನಲ್ಲಿ ಹೊಡೆಯುತ್ತಿದ್ದನು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ವಾಹನ ಅಪಘಾತ ಆಗಿದೆ ಎಂದರೆ ಸರಿಯಲ್ಲ. ವಿಮೆ ಪಡೆಯಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿರುವುದಿಲ್ಲ ನಾನು ಆಸ್ಪತ್ರೆಯಲ್ಲಿ ಇದ್ದೆನು. ಪೊಲೀಸರು ನನ್ನ ಬಳಿ ಬಂದಿರುವುದಿಲ್ಲ. ಆರೊಪಿತನನ್ನು ನಾನು ಈ ಮುಂಚೆ ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಅಪಘಾತದ ಸಮಯದಲ್ಲಿ ನೋಡಿರುತ್ತೆನೆ ಎಂದು ಹೇಳುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.